# ಹೆಚ್‌ಎಎಲ್‌ನಲ್ಲಿ ವಿಡಿಐಟಿ ವಿದ್ಯಾರ್ಥಿಗಳಿಗೆ ತರಬೇತಿ

»ಜನಮಾಧ್ಯಮ, ಶಿರಸಿ: ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಭಾರತದ ಪ್ರತಿಷ್ಠಿತ ವೈಮಾನಿಕ ಸಂಸ್ಥೆ ಹೆಚ್‌ಎಎಲ್ ಬೆಂಗಳೂರಿನಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. ಸಪ್ಟೆಂಬರ್ 23 ರಿಂದ ಅಕ್ಟೋಬರ್ 5ರವರೆಗೆ ನಡೆದ ಈ ತರಬೇತಿ ಕಾರ್ಯಕ್ರಮದಲ್ಲಿ ಆದಿತ್ಯ ಪಿ., ಅಕ್ಷತಾ ಪಿ., ಸುಮೇದ್ ಎಸ್., ಶ್ವೇತಾ ಪಿ., ಶ್ರೀದೇವಿ ಎ. ಭಾಗವಹಿಸಿದ್ದರು. ವೈಮಾನಿಕ ತಂತ್ರಜ್ಞಾನದ ಮೂಲಭೂತ ತತ್ವಗಳು, ವಿಮಾನ ತಯಾರಿಕೆಯಲ್ಲಿ ಬಳಸಲಾಗುವ ವಸ್ತುಗಳು ಹಾಗೂ ಅವುಗಳ ಗುಣ ಧರ್ಮಗಳು, ವಿಮಾನ ನಿಯಂತ್ರಣ, ಸುರಕ್ಷತಾ ಕ್ರಮಗಳು, ಹೆಲಿಕ್ಯಾಪ್ಟರ್ ವಿನ್ಯಾಸ ಹಾಗೂ ನಿಯಂತ್ರಣದ ಕುರಿತು ತರಬೇತಿ ಪಡೆದುಕೊಂಡರು.



ವೈಮಾನಿಕ ಕ್ಷೇತ್ರದಲ್ಲಿನ ನೂತನ ಬದಲಾವಣೆಗಳ ಕುರಿತು ಅರಿವು ಹೊಂದಲು ವಿದ್ಯಾರ್ಥಿಗಳಿಗೆ ಈ ತರಬೇತಿ ಕಾರ್ಯಕ್ರಮವು ಸಹಕಾರಿಯಾಗಿದ್ದು, ಭವಿಷ್ಯದಲ್ಲಿ ವೈಮಾನಿಕ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳಿಸಿಕೊಳ್ಳಲು ಅನುವು ಮಾಡಿಕೊಡಲಿದೆ ಎಂದು ಹೇಳಿದರು. ಎಚ್ ಎ ಎಲ್ ನೊಂದಿಗಿನ ಒಪ್ಪಂದದ ಅಡಿಯಲ್ಲಿ, ಮಹಾವಿದ್ಯಾಲಯದ ಪ್ರಾಯೋಜಕತ್ವದಲ್ಲಿ ಕಳೆದ ಮೂರು ವರ್ಷ ಗಳಿಂದ ವಿದ್ಯಾರ್ಥಿಗಳನ್ನು ಈ ತರಬೇತಿಗೆ ಕಳಿಸಲಾಗುತ್ತಿದೆ. ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್ ವಿದ್ಯಾರ್ಥಿಗಳನ್ನು ಅಭಿನಂದಿಸಿ ಶುಭ ಹಾರೈಸಿದರು.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಕೆ ಎಸ್ ಪೂಜಾರ್, ಟ್ರೈನಿಂಗ್ ಮತ್ತು ಸಂಚಾಲಕ ಪ್ರೊ. ರಜತ್ ಆಚಾರ್ಯ ಹಾಗೂ ಪ್ರೊ. ನವೀನ್ ಹಿರೇಮಠ್ ಹರ್ಷ ವ್ಯಕ್ತಪಡಿಸಿದ್ದಾರೆ.

# ಕೆಎಲ್‌ಎಸ್ ವಿಡಿಐಟಿ ವಿದ್ಯಾರ್ಥಿಗಳಿಗೆ ತರಬೇತಿ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಎಚ್.ಎ.ಎಲ್. ಬೆಂಗಳೂರಿನಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. ತರಬೇತಿ ಕಾರ್ಯಕ್ರಮದಲ್ಲಿ ಆದಿತ್ಯ ಪಿ., ಅಕ್ಷತಾ ಪಿ., ಸುಮೇದ್ ಎಸ್., ಶ್ವೇತಾ ಪಿ, ಶ್ರೀದೇವಿ ಎ. ಭಾಗವಹಿಸಿದ್ದರು.

ವೈಮಾನಿಕ ತಂತ್ರಜ್ಞಾನದ ಮೂಲಭೂತ ತತ್ವಗಳು, ವಿಮಾನ ತಯಾರಿಕೆಯಲ್ಲಿ ಬಳಸಲಾಗುವ ವಸ್ತುಗಳು ಹಾಗೂ ಅವುಗಳ ಗುಣ ಧರ್ಮಗಳು, ವಿಮಾನ ನಿಯಂತ್ರಣ, ಸುರಕ್ಷತಾ ಕ್ರಮಗಳು, ಹೆಲಿಕ್ಯಾಪ್ಟರ್ ವಿನ್ಯಾಸ ಹಾಗೂ ನಿಯಂತ್ರಣದ ಕುರಿತು ತರಬೇತಿ ಪಡೆದುಕೊಂಡರು. ವೈಮಾನಿಕ ಕ್ಷೇತ್ರದಲ್ಲಿನ ನೂತನ ಬದಲಾವಣೆಗಳ ಕುರಿತು ಅರಿವು ಹೊಂದಲು ವಿದ್ಯಾರ್ಥಿಗಳಿಗೆ ಈ ತರಬೇತಿ ಕಾರ್ಯಕ್ರಮವು ಸಹಕಾರಿಯಾಗಿದ್ದು, ಭವಿಷ್ಯದಲ್ಲಿ ವೈಮಾನಿಕ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳಿಸಿಕೊಳ್ಳಲು ಅನುವು ಮಾಡಿಕೊಡಲಿದೆ ಎಂದರು.

ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಕೆ.ಎಸ್. ಪೂಜಾರ್, ಟ್ರೈನಿಂಗ್ ಮತ್ತು ಸಂಚಾಲಕ ಪ್ರೊ. ರಜತ್ ಆಚಾರ್ಯ ಹಾಗೂ ಪ್ರೊ. ನವೀನ್ ಹಿರೇಮಠ್ ಹರ್ಷ ವ್ಯಕ್ತಪಡಿಸಿದ್ದಾರೆ.

